IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಬಲೀಂದ್ರ ಆರಾಧನೆ

## (ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಮರಾಟಿ ಸಮುದಾಯವನ್ನು ಅನುಲಕ್ಷಿಸಿ)

**ರಾಮಚಂದ್ರ**
**ಸಹಾಯಕ ಪ್ರಾಧ್ಯಾಪಕರು, ಭಂಡಾರ್‌ಕಾರ್ಸ್ ಕಾಲೇಜು**
**ಕುಂದಾಪುರ**

ಭಾರತವು ಸಾವಿರಾರು ಬುಡಕಟ್ಟು ಸಮುದಾಯವನ್ನು ಹೊಂದಿದೆ. ೨೦೦೧ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ ೮.೨ ರಷ್ಟು ಬುಡಕಟ್ಟು ಸಮುದಾಯಕ್ಕೆ ಸೇರಿದವರು. ಕರ್ನಾಟಕದ ಜನಸಂಖ್ಯೆಯ ಶೇಕಡಾ ೫.೧೭ರಷ್ಟು ಬುಡಕಟ್ಟು ಸಂಖ್ಯೆ ಹೊಂದಿದೆ. ರಾಜ್ಯದಲ್ಲಿ ಅಧಿಕೃತವಾಗಿ ಐವತ್ತು ಬುಡಕಟ್ಟು ಸಮುದಾಯಗಳಿವೆ ಎಂದು ಹೆಚ್ಚಿನ ಸರಕಾರಿ ವರದಿಗಳು ಹೇಳುತ್ತವೆ. ಈ ವರದಿಯು ಬಹುಶಃ ಬ್ರಿಟಿಷರ ಕಾಲದಿಂದ ಹರಿದು ಬಂದ ಮಾಹಿತಿಗಳ ಆಧಾರದಲ್ಲಿಯೇ ಐವತ್ತು ಬುಡಕಟ್ಟು ಸಮುದಾಯ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂಬುದಾಗಿ ತಜ್ಞರ ಅಭಿಪ್ರಾಯವಾಗಿದೆ. ಸ್ವತಂತ್ರ ಭಾರತದ ನಂತರದಲ್ಲಿ ನಮ್ಮ ನೆಲದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಮನದಂಡಗಳ ಆಧಾರದಲ್ಲಿ ಪರಿಪೂರ್ಣವಾದ, ವೈಜ್ಞಾನಿಕವಾದ ಹಾಗೂ ಸಮಗ್ರವಾದ ಸಮೀಕ್ಷೆ ನಡೆದಿಲ್ಲ ಎಂಬುದು ಖೇದಕರದ ಸಂಗತಿಯಾಗಿದೆ. ಈ ಕೊರತೆಯಿಂದಾಗಿಯೇ ಅರ್ಹತೆಯಿಲ್ಲದ ಹಲವಾರು ಬುಡಕಟ್ಟು ಸಮುದಾಯ ಸರ್ಕಾರ ಪಟ್ಟಿಯಲ್ಲಿ ಸೇರಿರಲೂಬಹುದು. ಬುಡಕಟ್ಟು ಸಮುದಾಯಗಳ ಹೆಸರುಗಳು ಪುನರಾವರ್ತನೆಗೊಂಡಿರುವುದು ಕೂಡ ಕಂಡುಬಂದಿರುತ್ತದೆ.

೨೦೦೧ರ ಜನಗಣತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೊರಗ, ಮಲೆಕುಡಿಯ ಮತ್ತು ಮರಾಟಿ ಸಮುದಾಯವನ್ನು ಒಳಗೊಂಡಂತೆ ಒಟ್ಟು ೬೨೯೩೬ ಆಗಿರುತ್ತದೆ.೨೦೧೧ರ ಜನಸಂಖ್ಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಪುರುಷರು ೪೦೯೬೧, ಮಹಿಳೆಯರು ೪೧೩೦೭, ಒಟ್ಟು ೮೨೨೬೮ ಆಗಿರುತ್ತದೆ. (ಆಧಾರ: ಜನಗಣತಿ೨೦೦೧ ಮತ್ತು ೨೦೧೧ ಪುಟ ೨೭೬-೨೭೭) ೨೦೧೧ರ ಜನಸಂಖ್ಯೆಯ ಪ್ರಕಾರ ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಪುರುಷರು ೨೬೨೨೮ ಮಹಿಳೆಯರು ೨೬೬೬೭ ಒಟ್ಟು ೫೨೮೯೭.

ಶ್ರೇಣಿಕೃತ ಸಾಮಾಜಿಕ ರಚನೆಯುಳ್ಳ ಹಾಗೂ ವರ್ಣವ್ಯವಸ್ಥೆಗೆ ಒಳಪಟ್ಟ ನಾಗರಿಕರೂ, ಸುಶಿಕ್ಷಿತರೂ ಎಂದು ಕರೆಯಲ್ಪಡುವ ಅನೇಕ ನಗರ ಪ್ರದೇಶದಲ್ಲಿ ತಮ್ಮ ವೃತ್ತಿಯೊಂದಿಗೆ ಜೀವನ ಮುಂದುವರಿಸಿಕೊಂಡಿದ್ದರೆ, ಇನ್ನೊಂದೆಡೆಗೆ ನಾಗರಿಕ ಸೌಲಭ್ಯಗಳಿಂದ ದೂರ ಉಳಿದು ಗುಡ್ಡ ಬೆಟ್ಟಗಳ ಅಂಚುಗಳಲ್ಲಿ ನೆಲೆಸಿರುವ ಮರಾಟಿಗರು ಯಾವಾಗ, ಯಾವ ಕಾರಣದಿಂದ, ಎಲ್ಲಿಗೆ, ಯಾಕೆ ಬಂದರುಎಂಬುದಕ್ಕೆ ನಿಖರವಾಗಿ ಉತ್ತರ ತಿಳಿದಿಲ್ಲ. ಅವರು ಕರಾವಳಿ ಜಿಲ್ಲೆಗಳಾದ ಕಾಸರಗೋಡು, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ, ಕಾರವಾರ ಹಾಗೂ ಮಲೆನಾಡು ಪ್ರದೇಶದಲ್ಲಿ ನೆಲೆಸಿದ್ದಕ್ಕೆ ಅವರದ್ದೇಯಾದ ಐತಿಹ್ಯ ವಿವರಣೆಗಳು ಇರುವುದಾಗಿದೆ.

ಮಹಾರಾಷ್ಟ್ರದ ಶಿವಾಜಿ ಸೈನಿಕರು, ಕೃತಿಯ ವಂಶಸ್ಥರು ತಾವೆಂದು ಹೆಮ್ಮೆಪಟ್ಟುಕೊಳ್ಳುತ್ತಾರೆ. ಶಿವಾಜಿಯ ಸೈನ್ಯದ ಮೇಲೆ ಮುಸ್ಲಿಂಮರ ದಾಳಿಯಿಂದ, ಪ್ರಕೃತಿ ವಿಕೋಪಗಳಿಂದ, ಅಸಹಾಯಕರಾಗಿ ಗೋವಾ ಹಾಗೂ ಕರ್ನಾಟಕದ ಕಾಡುಮೇಡುಗಳ ಮೂಲಕ ಬಂದು ನೆಲೆಸಿರುವುದಾಗಿ ತಿಳಿಸುತ್ತಾರೆ. ಕಾಲಾಂತರದಲ್ಲಿ ಆಧುನಿಕತೆ, ಮೇಲ್ವರ್ಗದಜನರ ಮುಖ್ಯವಾಗಿ ದ್ವಿಜರ ಸಂಸ್ಕೃತಿಯ ಪ್ರಭಾವ, ಪಾಶ್ಚಿಮಾತ್ಯಕರಣ, ಜಾಗತೀಕರಣ, ಪ್ರಕ್ರಿಯೆಗಳ ಪ್ರಭಾವಕ್ಕೆ ಸಿಲುಕಿ ಸ್ಥಿತ್ಯಂತರಗೊಂಡು ಭಿನ್ನ ಭಿನ್ನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವುದು ಗಮನಕ್ಕೆ ಬರುತ್ತದೆ, ಅಲ್ಲದೆ ವಲಸೆ ಬಂದಿರುವ ಮರಾಟಿ ಬುಡಕಟ್ಟು ಸಮುದಾಯವು ಸ್ಥಳೀಯ ಜೀವನ ಪದ್ಧತಿಗಳ ಪ್ರಭಾವಕ್ಕೆ ಒಳಗಾಗಿರುತ್ತದೆ,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವವರನ್ನು 'ಮರಾಟಿ'ಗಳೆಂದು ಹಾಗೂ ಕೊಡಗು ಜಿಲ್ಲೆಯಲ್ಲಿ ವಾಸ್ತವ್ಯವಿರುವವರನ್ನು 'ಮರಾಠಿ'ಯವರೆಂದು ಕರೆಯುತ್ತಾರೆ. ಭಾರತ ಸರಕಾರ ಹಾಗೂ ರಾಜ್ಯ ಸರಕಾರ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವರು. ಇವರನ್ನು ಮರಾಠ ಅಥವಾ ಮರಾಟಿ ಎಂಬುದಾಗಿ ಕರೆಯುತ್ತಾರೆ. ತಮ್ಮನ್ನು ತಾವು ಕ್ಷತ್ರಿಯರೆಂದು ಗುರುತಿಸಿಕೊಂಡು 'ಕ್ಷತ್ರಿಯ ಮರಾಠಿ' ಎಂತಲೂ, 'ಆರ್ಯ ಮರಾಠಿ' 'ಅರೇರು' ಎಂಬುದಾಗಿ ಗುರುತಿಸಿ 'ಆರ್ಯ ಯಾನೆ ಮರಾಠಿ' ಎಂಬುದಾಗಿ ಗುರುತಿಸಿಕೊಂಡಿರುವರು. ಬ್ರಾಹ್ಮಣೇತರ ಮರಾಟಿಗಳು ಛತ್ರಪತಿ ಶಿವಾಜಿ ಹಾಗೂ ಪೇಶ್ವೆಯವರ ಕಾಲದಲ್ಲಿ ಸೈನ್ಯದಲ್ಲಿ ಸೈನಿಕರಾಗಿದ್ದು, ಕಾರಣಾಂತರಗಳಿಂದ ಕರ್ನಾಟಕ ಮತ್ತು ಕೇರಳ ರಾಜ್ಯದ ಬೆಟ್ಟ, ಪರ್ವತದಂಚಿಗೆ, ಗಿರಿಕಂದರಗಳತ್ತ ಬಂದು ಅಲ್ಲಿಯೇ ನೆಲೆ ನಿಂತು ಕಾಲಕ್ರಮೇಣ ಬುಡಕಟ್ಟುಕರಣಕ್ಕೊಳಗಾದರು.

ಮರಾಟಿ ಬುಡಕಟ್ಟಿನವರನ್ನು ಸ್ಥಳೀಯ ತುಳುವರು 'ಅರೆ ಮರಾಟಿ', 'ಕಾಡು ಮರಾಟಿ', 'ಕನಡೇರು, ಕ್ಷತ್ರಿಯ ಮರಾಟಿ', 'ಮರಾಠೇರು', 'ಮರಾಠಿ', 'ಮರಾಠ' ಎಂಬ ಪದಗಳಿಂದ ಕರೆಯುವರು. ಇವರು ತಮ್ಮ ಹೆಸರುಗಳೊಂದಿಗೆ ಹೆಚ್ಚಾಗಿ ರಾವ್, ಜೀ, ಓಜೀ ಎಂತಲೂ ಕರೆಯುತ್ತಾರೆ. ಈ ಮೂರು ಪದಗಳು ಗೌರವ, ಮರ್ಯಾದೆ ಸೂಚಕ ಪದಗಳು ಅವರ ಹೆಸರಿನೊಂದಿಗೆ ವಿಲೀನಗೊಂಡಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಮುಲ್ಕಿ ಹೋಬಳಿಯ ಕವತ್ತಾರು, ಎಳತ್ತೂರು, ಕೊಲ್ಲೂರು, ಕುಕ್ಕಿಕಟ್ಟೆಯಲ್ಲಿ ೩೪ ಮನೆಗಳಿದ್ದು, ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹಿರೇಯಂಗಡಿ, ಜೋಡುಕಟ್ಟೆ, ಕುಂಟಲಪ್ಪಾಡಿ, ಕಾರ್ಕಳ ಪಟ್ಟಣ ಸಾಣೂರು ಗ್ರಾಮಗಳಲ್ಲಿ ಸುಮಾರು ೧ಲಕ್ಷ ಕುಟುಂಬಗಳು ವಾಸವಾಗಿರುವುದು ಕ್ಷೇತ್ರಕಾರ್ಯದ ಕಂಡುಬಂದಿದೆ. ಇವರಲ್ಲಿ ಬಳಿ ಪದ್ಧತಿ ಚಾಲ್ತಿಯಲ್ಲಿದೆ. ಸುಮಾರು ೬೩ ಬಳಿ ಇರುವುದೆಂದು ಮಾಹಿತಿದಾರರು ತಿಳಿಸಿರುವರು. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮರಾಟಿ ಸಮುದಾಯದಲ್ಲಿ ಬೆಡ್ಕಂ, ಅಸಲ್, ಬೇಡೇಕರ್, ಬೊಂಸ್ಲೆ, ಚವ್ಹಾನ/ಚವನ್, ಮೊರೆ, ದೇವಕರ, ಜಗತಾಪ, ಜಾದವ, ರಾಥೋಡ್, ಪವಾರ, ಸಿಂಧೆ, ಸೆಪ್ಟೇಕರ, ತಾಮಸ್, ಉಬ್ಲೇಕರ, ವಾಗ್ಮಾನ್, ವಿಡೆ ಮುಂತಾದ ೧೭ ಬಳಿಗಳು ದೊರೆತಿವೆ. ಇವುಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುವಲ್ಲಿ ಸಹಕಾರಿಯಾಗಿದೆ.

ಕೃಷಿ ಸಮುದಾಯವು ಭಕ್ತಿ ಗೌರವಗಳಿಂದ ಆರಾಧಿಸುವ ದೈವ ಬಲೀಂದ್ರ. ನಿರ್ದಿಷ್ಟ ರೂಪವಿಲ್ಲದ, ಬಹುತ್ವವನ್ನು ಸಂಕೇತಿಸುವ ಶುದ್ಧ ಸಸ್ಯಹಾರಿ ಎಡೆ ಸ್ವೀಕರಿಸುವ ದೈವ. ಈ ದೈವದ ಆರಾಧನೆ ಅವಿಭಜಿತ ದಕ್ಷಿಣ ಕನ್ನಡ ಹಾಗೂ ಮಲೆನಾಡುಗಳಲ್ಲಿ ಕಂಡು ಬರುತ್ತದೆ. ಬಲೀಂದ್ರನು ಕೃಷಿ ರಾಜ್ಯದ ಚಕ್ರವರ್ತಿ ಎಂದೇ ಭಾವಿಸಲಾಗುತ್ತಿದೆ. ಬಲೀಂದ್ರನಿಗೆ (ಬಲಿಚಕ್ರವರ್ತಿಗೆ) ತುಳುವಿನಲ್ಲಿ 'ಭೂಮಿಪುತ್ರ' ಎಂದು ಕರೆಯುವುದು. ದೀಪಾವಳಿ ಹಬ್ಬದಂದು ಬಲಿಯು ತನ್ನ ರಾಜ್ಯವನ್ನು ನೋಡಿ ಹೋಗುತ್ತಾನೆಂದು ನಂಬಲಾಗುತ್ತಿದೆ. ಕತ್ತಲ ರಾತ್ರಿಯಲ್ಲಿ ಬರುವ ಬಲಿಯನ್ನು ಸಾಲುದೀಪ ಬೆಳಗುವುದರೊಂದಿಗೆ ಸಾಂಕೇತಿಕವಾಗಿ ಸ್ವಾಗತಿಸುತ್ತಾರೆ. ಫಲಪುಷ್ಪ, ದೀಪಗಳು ಕೃಷಿ ಕಾರ್ಯ ಚಟುವಟಿಕೆಗಳ ಮೇಲೆ ಕಾಳಜಿ ವಹಿಸುವಂತೆ ಎಚ್ಚರಿಸುವ ಸಂದೇಶವು ಈ ಆಚರಣೆಯ ಅಂತರ್ಯದೊಳಗೆ ಅಡಗಿದೆ.

ಕನ್ನಡ ವಿಷಯ ವಿಶ್ವಕೋಶದಲ್ಲಿ 'ಬಲಿ'ಯ ಬಗೆಗೆ ನೀಡಿದ ವಿವರಗಳು ಮಹತ್ವವಾಗಿವೆ. ಬಲಿ ಚಕ್ರವರ್ತಿಯನ್ನು ವಿಷ್ಣುವು ವಾಮನ ಅವತಾರದಿಂದ ಪಾತಾಳಕ್ಕೆ ತುಳಿದ ದಿನ.ಪ್ರಹ್ಲಾದ ರಾಜನ ಮೊಮ್ಮಗ, ಬಲಿ ಇಂದ್ರನಿಂದ ಹತನಾಗಿ, ಶುಕ್ರಚಾರ್ಯನ ಮೃತ ಸಂಜೀವಿನಿಯಿಂದ ಬದುಕಿ ವಿಶ್ವಜಿತ್ತೆಂಬ ಯಾಗವನ್ನು ಮಾಡಿ, ಅಗ್ನಿದೇವನ ಮೂಲಕ

ರಥಾಶ್ವಧ್ವಜಗಳನ್ನು ತನ್ನ ಪಿತಾಮಹನಾದ ಪ್ರಹ್ಲಾದನಿಂದ ದಿವ್ಯಧನುಸ್ಸನ್ನು, ಅಕ್ಷಯ ಬತ್ತಳಿಕೆನ್ನು ಪಡೆದು, ಇಂದ್ರನ ಮೇಲೆ ಯುದ್ಧ ಮಾಡಿ ಅವನನ್ನು ಸೋಲಿಸಿ ಸ್ವರ್ಗವನ್ನು ವಶಪಡಿಸಿಕೊಂಡ. ನಂತರ ಬ್ರಹ್ಮಾದಿಗಳ ಮೊರೆಯನ್ನು ಕೇಳಿ ವಿಷ್ಣು ಅದಿತಿ ದೇವಿವಾಮನ ರೂಪದಿಂದ ಅವತರಿಸಿ, ಉಪನಯನಾನಂತರ ಬಲಿ ಚಕ್ರವರ್ತಿಯಲ್ಲಿಗೆ ಬಂದು, ಮೂರು ಅಡಿ ಭೂಮಿಯನ್ನು ಬೇಡಿದನು.

ಈ ಸಂದರ್ಭದಲ್ಲಿ ಶುಕ್ರಚಾರ್ಯರು ವಿರೋಧಿಸಿದರು. ಆದರೆ ಬಲಿ ಅವರ ಮಾತನ್ನು ಕೇಳದೇ ಮೋಸ ಹೋಗುತ್ತಾನೆ. ಬಲಿ, ವಾಮನನಿಗೆ ಮೂರು ಅಡಿ ಸ್ಥಳ ನೀಡಲು ಸಿದ್ಧನಾದ. ಅದರಂತೆ ವಾಮನ ಒಂದು ಹೆಜ್ಜೆಯನ್ನು ಭೂಮಿಯ ಮೇಲೂ, ಇನ್ನೊಂದು ಹೆಜ್ಜೆಯನ್ನು ಆಕಾಶದ ಮೇಲೂ ಇಟ್ಟು ಅಳೆದು, ಮೂರನೇ ಹೆಜ್ಜೆಯನ್ನು ಬಲಿಯ ತಲೆಯ ಮೇಲೆ ಇರಿಸಿ, ಆತನನ್ನು ಪಾತಾಳಕ್ಕೆ ತಳ್ಳಿದನು. ಬಲಿಯ ಬೇಡಿಕೆಯಂತೆ ವರ್ಷದಲ್ಲಿ ಮೂರು ದಿನಗಳು ಪಾತಾಳದಲ್ಲಿ ಸಕಲ ವೈಭವವನ್ನು ಅನುಭವಿಸುತ್ತ ಇಂದ್ರ ಪದವಿಯನ್ನು ಪಡೆಯಲು ಹಾಗೆಯೇ ವರ್ಷದಲ್ಲಿ ಮೂರು ದಿನ ತನ್ನ ರಾಜ್ಯವನ್ನು ನೋಡುವ ಅವಕಾಶವನ್ನು ಮಹಾವಿಷ್ಣು ಅವನಿಗೆ ಕರುಣಿಸುತ್ತಾನೆ.

ಬಲೀಂದ್ರ ರಾಜನ ತಾಯಿ ಪ್ರಜೆಗಳನ್ನು ನೋಡಲು ಸೋಣ ತಿಂಗಳ (ಸಿಂಹ ಸಂಕ್ರಾಂತಿ)ಗೆ ಬಲಿ ಚಕ್ರವರ್ತಿ ಆದೇಶದಂತೆ ಭೂಲೋಕಕ್ಕೆ ಬರುತ್ತಾಳೆ ಎಂಬ ನಂಬಿಕೆ ಮರಾಟಿಗರಲ್ಲಿದೆ. ಕರ್ಕಾಟಕ ಮಾಸದ ಅಮವಾಸ್ಯೆ ದಿನದಂದು ಆಟಿದ ಅಮಾಸೆ ಬೇಸಾಯಗಾರ ಭತ್ತದ ಸಸಿಗಳು ತುಂಬಿದ ತನ್ನ ಗದ್ದೆಗಳಿಗೆ ಕಾಸರ್ಕದ ಕೋಲುಗಳನ್ನು ಊರುತ್ತಿದ್ದಾಗ, ಆತನ ಗದ್ದೆಗಳಲ್ಲಿ ಎಲೆಗಳುಳ್ಳ ಸಣ್ಣ ಸಣ್ಣ ಟಿಸಿಲುಗಳುಳ್ಳ ಕೂಡಿದ ಕೋಲುಗಳನ್ನು ಕಾಣಿಸಿಕೊಳ್ಳುತ್ತವೆ. ಒಂದು ಕಾಲಕ್ಕೆ ಪುರಾಣದ ಬಲಿಚಕ್ರವರ್ತಿಯು ಈ ತುಳುನಾಡನ್ನು ಆಳಿದ್ದು, ಆತನು ಭೂಮಿಯ ಮೇಲಿರುವ ತನ್ನ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಲು ತನ್ನ ಆಳುಗಳನ್ನು ಕಳುಹಿಸಿಕೊಡುವುದರ ಸಂಕೇತವಾಗಿ ಆಚರಿಸುವ ಆಚರಣೆಯೇ ಕಾಸರ್ಕದ ಕೋಲೂರುವ ಈ ಕ್ರಿಯೆ ಎಂದು ಜನಪದರು ನಂಬಿದ್ದಾರೆ.

ವ್ಯವಸಾಯಕ್ಕೆ ಬಳಸುವ ವಸ್ತುಗಳು, ಗೃಹಪಯೋಗಿ ವಸ್ತುಗಳಾದ ಒನಕೆ, ಕಡಗೋಲು, ಮೊರ, ಗೆರಸಿ, ಸಾರಣಿಗೆ, ಬೀಸುವ ಕಲ್ಲು, ಕಡೆಯುವ ಕಲ್ಲು, ಕತ್ತಿಗಳು, ಕೊಳಗ, ತಕ್ಕಡಿ ಇತ್ಯಾದಿಗಳಲ್ಲದೇ ಬೇಟೆಯ ಸಾಧನಗಳಾದ ಕೋವಿ, ಭರ್ಚಿ, ಈಟಿ, ಕತ್ತಿ ಇನ್ನೂ ಮುಂತಾದ ವಸ್ತುಗಳನ್ನು ತೊಳೆದು, ಒರಸಿ, ಮನೆಯ ಜಗುಲಿಯಲ್ಲಿ ಒಂದೆಡೆ ಓರಣವಾಗಿ ಇಡುತ್ತಾರೆ. ಅವುಗಳಿಗೆ ಶೇಡಿಮಣ್ಣು, ಕೆಮ್ಮಣ್ಣುಗಳಿಂದ ಪಟ್ಟೆ ಬರೆಯುತ್ತಾರೆ. ಬಲೀಂದ್ರನು ಮೇಲು ಚಪ್ಪರವನ್ನು ಅಂಬಾಡಿ ಎಲೆ, ಮಾವು, ಹಲಸು, ಏಲಕ್ಕಿ ಕರೆ, ಪಚ್ಚೆತೆನೆ, ಅಡಿಕೆ ಹಿಂಗಾರ, ನೆಲ್ಲಿಸೊಪ್ಪು, ಬಾಳೆಗೊನೆ, ಸೌತೆಕಾಯಿ, ತೆಂಗಿನಕಾಯಿ, ಅಡಿಕೆಕಾಯಿ, ಕಕ್ಕೆಕಾಯಿ, ಲಿಂಬೆಕಾಯಿ, ಕಿತ್ತಳೆ ಸೊಪ್ಪು, ಹಲಸಿನ ಸೊಪ್ಪು, ಹಲಸಿನ ಕಾಯಿ, ಲಿಂಬೆ ಸೊಪ್ಪು, ಉತ್ತರಾಣಿ ಹೂವು ಅಲ್ಲದೇ ವಿವಿಧ ಬಗೆಯ ಹೂವುಗಳಿಂದ ಶೃಂಗರಿಸುತ್ತಾರೆ. ಉಪಕರಣಗಳ ಎದುರು ಬಾಳೆಯ ಎಲೆಯ ಮೇಲೆ ಸಗಣಿಯ ಸಣ್ಣ ವೇದಿಕೆ ನಿರ್ಮಿಸಿ, ಕಲಶ ಪ್ರತಿಷ್ಠಾಪಿಸುತ್ತಾರೆ. ಕಲಶದ ಒಂದು ಮಗ್ಗುಲಲ್ಲಿ ಸಗಣಿಯಿಂದ ಮಾಡಿದ ಬೆನಕನನ್ನು, ಇನ್ನೊಂದು ಭಾಗದಲ್ಲಿ ಉರಿಯುತ್ತಿರುವ ಹಣತೆಯನ್ನು ಇಡುತ್ತಾರೆ. ಹೊಲ, ತೋಟಗಳೇ ಬಲೀಂದ್ರ ದೈವದ ರಾಜ್ಯವೆಂದು ಭಾವಿಸುತ್ತಾರೆ. ಸಸ್ಯ, ಜಲ, ಮಣ್ಣು ಹಾಗೂ ದೀಪಗಳು ಬಲೀಂದ್ರನನ್ನು ಸಂಕೇತಿಸುವುದರೊಂದಿಗೆ ಆಹಾರೋತ್ಪಾದನೆಯ ಬಹುಮುಖ್ಯ ಅಂಶಗಳ ಬಗೆಗಿನ ಜ್ಞಾನದ ಕಡೆಗೆ ಬೆಳಕು ಚೆಲ್ಲಿವೆ.

ತುಳುನಾಡಿನ ಮರಾಟಿಗರು ಬಲೀಂದ್ರನನ್ನು ವಿಶೇಷವಾಗಿ ಪೂಜಿಸುತ್ತಾರೆ. ಮನೆಯ ಯಜಮಾನನೊಬ್ಬ ದೀಪಾವಳಿಯ ಅಮವಾಸ್ಯೆ ಊಟ ಮಾಡುವುದರೊಂದಿಗೆ ಹಬ್ಬ ಚಾಲನೆ ಪಡೆಯುತ್ತದೆ. ಅಂದು ಹಾಲೆಮರದಿಂದ ಮೂರು ಕವಲುಗಳಿರುವ ಎರಡು ಕೊಂಬೆಗಳನ್ನು ಕತ್ತರಿಸಿ ತರುತ್ತಾರೆ. ತಮ್ಮ ಮನೆಗೆ ತುಳಸಿಕಟ್ಟೆಯ ಬಲಭಾಗದಲ್ಲಿ ನೆಟ್ಟು, ಹೂವು, ಹೂವಿನ ಮಾಲೆಗಳಿಂದ ಅಲಂಕರಿಸಿ, ಅದರ ತುತ್ತ ತುದಿಗೆ ಛತ್ರಿಯೊಂದನ್ನು ಕಟ್ಟುತ್ತಾರೆ. ಬಲೀಂದ್ರನನ್ನು ವಿಶೇಷವಾಗಿ ಚೆಂಡುಹೂ, ಪಾದೆಹೂ ಹಾಗೂ ಅಂಬಳಕಾಯಿ ಸರಗಳಿಂದ ಅಲಂಕರಿಸುವುದು ರೂಢಿ. ಬಲೀಂದ್ರನ ಎದುರಲ್ಲಿ ಎಲೆಯ ಮೇಲೆ ಬೆಳ್ತಿಗೆ ಅಕ್ಕಿ ಹಾಗೂ ತೆಂಗಿನ ಕಾಯಿಗಳನ್ನು ಇಟ್ಟು ಕೋಲು ದೀಪಗಳಿಂದ ಬೆಳಗುತ್ತಾರೆ.

ಎರಡನೇ ದಿನ ತಮ್ಮ ಆರಾಧ್ಯ ದೈವಗಳಾದ ಪಂಜುರ್ಲಿ, ಅಣ್ಣಪ್ಪ ಪಂಜುರ್ಲಿಗಳಿಗೆ ತಂಬಿಲ ಕೊಡುತ್ತಾರೆ. ಅಲ್ಲದೇ ಎಡೆ ಹಾಕಿ ಕೋಳಿಗಳನ್ನು ಬಲಿ ನೀಡಿಸ ಪ್ರಾರ್ಥಿಸಿಕೊಳ್ಳುತ್ತಾರೆ. ಅಂದು ದನಕರುಗಳಿಗೆ ತಿನ್ನಲು ಕಟಾವು ಮಾಡಿದ ಗದ್ದೆಯ ಒಡ್ಡನ್ನು ಹಸಿರು ಹುಲ್ಲಿನ ಜೊತೆ ಸೇರಿಸಿ ಹಾಕುತ್ತಾರೆ. ಈ ಬಗೆಯ ತಿನಿಸನ್ನು ಉಳಿದ ದಿನಗಳಲ್ಲಿ ಹಾಕುವುದಿಲ್ಲ.

ದೀಪಾವಳಿಯನ್ನು 'ಪರ್ಬೊ' ಎಂದು ಕರೆಯುತ್ತಾರೆ. ತಮ್ಮ ದೈವಗಳಿಗೆ ದೀಪ ಬೆಳಗಿ ಅವರನ್ನು ತೃಪ್ತಿಪಡಿಸಿ, ಧನ್ಯರಾಗುವ ವಿಶಿಷ್ಟ ಹಬ್ಬವಾಗಿ ಆಚರಿಸುತ್ತಾರೆ. "ಇತರೆ ಎಲ್ಲಾ ಹಬ್ಬ-ಹರಿದಿನಗಳಲ್ಲಿ ದೀಪವಿಟ್ಟು ಆಚರಿಸಿದರೂ, ದೀಪಾವಳಿಯ ದೀಪಕ್ಕೆ ವಿಶೇಷ ಮಹತ್ವ, ಮೆರಗು ಇರುವುದು ಈ ಆಚರಣೆಯ ಮೂಲಕ ವ್ಯಕ್ತವಾಗುತ್ತದೆ. ದೀಪಾವಳಿ ಅಮವಾಸ್ಯೆ ಇವರ ಪಾಲಿನ ವಿಶೇಷ ಅಮವಾಸ್ಯೆಗಳಲ್ಲಿ ಒಂದು. ಈ ಹಬ್ಬ ಇನ್ನು ಒಂದು ವಾರವಿದೆ ಎನ್ನುವಾಗಲೇ ಈ ಹಬ್ಬದ ತಯಾರಿ ಆರಂಭವಾಗುತ್ತದೆ. ಮನೆ ಹಾಗೂ ಸುತ್ತಲಿನ ಪರಿಸರ ಸ್ವಚ್ಛಗೊಳಿಸುವಿಕೆಯಿಂದ ಹಿಡಿದು ಎತ್ತು, ದನಕರುಗಳನ್ನು ಚೆನ್ನಾಗಿ ತೊಳೆದು ಸ್ವಚ್ಛವಾದ ಹುಲ್ಲು-ಆಹಾರ ಹಾಕುವುದೇ ಹಬ್ಬದ ಒಂದು ಭಾಗ". ಅಂದು ರಾತ್ರಿ ಕುಟುಂಬದ ಸದಸ್ಯರೆಲ್ಲರೂ ಸ್ನಾನ ಮುಗಿಸಿ, 'ಬಲೀಂದ್ರ ಕೂಗಲು' ಸಿದ್ಧತೆ ನಡೆಸುತ್ತಾರೆ. ತುಳುವಿನಲ್ಲಿ 'ಮರ ಆಳುನೆ' ಎಂದು ಕರೆಯುತ್ತಾರೆ. ಅಂಗಳದ ತುಳಸಿಯ ಕಟ್ಟೆಯ ಪಕ್ಕ ಪ್ರತಿಷ್ಠಾಪಿಸಿದ ಬಲೀಂದ್ರನ ಪೂಜೆಗೆ ಸಿದ್ಧತೆ ಮಾಡಿಕೊಂಡು ಮನೆಯವರೆಲ್ಲ ಸೇರುತ್ತಾರೆ. ಮನೆಯ ಯಜಮಾನ ಹಾಡಿನ ಮೂಲಕ ಬಲೀಂದ್ರನನ್ನು ಕರೆಯುತ್ತಾನೆ.

**'ಆಟಿದ ಪುಣ್ಣಮೆ ಏಳರೆ ಸಂಕ್ರಾಂತಿ ದೀಪಾವಳಿ ಕೊಡಿಪರ್ಬ**
**ಆ ಊರ್ದ ಪೊಲಿ ಕೊಣಲ, ಈ ಊರ್ದ ಬಲಿ ಕೊಂಡೊಲ**
**ನಿನ್ನ ರಾಜ್ಯ ವೈಭವೊನು ಸೂವರ ಬಲಿ ಬಲೀಂದ್ರ ಹರಿಯೋಹರಿ'**
**ಎಂದು ಹೇಳಿದಾಗ ಮನೆಯ ಸದಸ್ಯರೆಲ್ಲ ಬಲೀಂದ್ರ ಮರಕ್ಕೆ ಅಕ್ಷತೆ ಹಾಕಿ 'ಕೂ....'** ಎನ್ನುತ್ತಾರೆ. ಹೀಗೆ ಮೂರು ಬಾರಿ ಅಕ್ಷತೆ ಹಾಕಿ 'ಕೂ...' ಎನ್ನುತ್ತಾರೆ. ನಂತರ ಪಟಾಕಿಗಳನ್ನು ಸಿಡಿಸಿ ಆನಂದಿಸುತ್ತಾರೆ.

ಗೋಪೂಜೆಯ ದಿನದಂದು ಕೂಡ ಬಲೀಂದ್ರವನ್ನು ವಿಶೇಷವಾಗಿ ಪೂಜಿಸುವ ಪದ್ಧತಿ ಇದೆ. ಅಲ್ಲದೆ ಅಂದು ಅವರು ದನಕರುಗಳನ್ನು ಪೂಜಿಸುತ್ತಾರೆ. ಗೆರಸೆಯಲ್ಲಿ ಭತ್ತ, ಕುಂಕುಮ, ಆರತಿ, ಬಾಳೆಹಣ್ಣು, ತೆಂಗಿನೆಣ್ಣೆ, ಅವಲಕ್ಕಿ ಜೊತೆಗೆ ಇಡ್ಲಿ, ದೋಸೆ ಇತ್ಯಾದಿಗಳನ್ನು ಇಟ್ಟುಕೊಂಡು ಹಟ್ಟಿಗೆ ಹೋಗುತ್ತಾರೆ. ಹಟ್ಟಿಯ ಬಾಗಿಲಿಗೆ ಹಾಲೆ ಮರದ ಮೂರು ಕವಲಿರುವ ಚಿಕ್ಕ ಕೊಂಬೆಯನ್ನು ನೆಟ್ಟಿರುತ್ತಾರೆ. ಅದರಲ್ಲಿ ದೀಪ ಬೆಳಗುತ್ತಾರೆ. ಇದೇ ರೀತಿ ಗದ್ದೆಗಳಿಗೂ, ಅಡಿಕೆ ತೋಟಗಳಿಗೂ ನೆಡುತ್ತಾರೆ. ಹಟ್ಟಿಯಲ್ಲಿರುವ ಪ್ರತಿಯೊಂದು ದನ-ಕರು-ಎತ್ತುಗಳಿಗೂ ಹೆಂಗಸರು ಆರತಿ ಎತ್ತಿ "ಕಲ್ಲಾಡಿತ ಪಂತಿ ಮಗ, ಮಲ್ಲಾಡಿತ ಪೇರ್ ಮಗ, ತುಡಾರ್ ಬಾಳ್ ಮಗ ಬಾಳ್ (ಕಲ್ಲಾಡಿಯ ಹುಲ್ಲು ಮಗ, ಮಲ್ಲಾಡಿಯ ಹಾಲು ಮಗ, ದೀಪ ಮಗ ದೀಪ, ಬಾಳಿರಿ ಮಗ ಬಾಳಿರಿ) ಎಂದು ತುಳುವಿನಲ್ಲಿ ಹೇಳುತ್ತಾರೆ. ನಂತರ ನೈವೇದ್ಯವನ್ನು ತಿನ್ನಲು ಕೊಡುತ್ತಾರೆ. ಮಾರನೇ ದಿನ ದನಕರುಗಳ ಕೊರಳಿಗೆ ಚೆಂಡು ಹೂ ಇನ್ನಿತರ ಹಾರಗಳಿಂದ ಶೃಂಗರಿಸುತ್ತಾರೆ. ಅಲ್ಲದೇ ಅಂದು ರಾತ್ರಿಯು ಹಟ್ಟಿಯಲ್ಲಿ ದೀಪ ಬೆಳಗುತ್ತಾರೆ. ಬಲೀಂದ್ರ ಮರದ ಬುಡದಲ್ಲಿ ಮಣೆಯ ಮೇಲೆ ಅವಲಕ್ಕಿ, ಎಳನೀರು ಇತ್ಯಾದಿ ಇಡುತ್ತಾರೆ.

ನಾಲ್ಕನೇ ದಿನ ಬೆಳಗ್ಗೆ ಬಲೀಂದ್ರನ ಮರವನ್ನು ಕಿತ್ತು ಹರಿಯುವ ನೀರಿನಲ್ಲಿ ಇಟ್ಟು ಬರುತ್ತಾರೆ. ಬಲೀಂದ್ರ ಮಾಡಲು ಹಾಲೆ ಮರದ ಕೊಂಬೆ ಉಪಯೋಗಿಸುತ್ತಾರೆ. ಸೂತಕವಿದ್ದವ ಮರ ಹಾಕುವುದಿಲ್ಲ. ಎಲ್ಲೆಲ್ಲೋ ಸಮೃದ್ಧಿ ಎನ್ನುವುದನ್ನು "ಪರ್ಬ ಗದ್ದಲ ಬಜಿಲ್ ಮುಕ್ಕೊಂಡೆ" (ದೀಪಾವಳಿ ಗದ್ದಲದಲ್ಲಿ ಅವಲಕ್ಕಿಯನ್ನು ಮುಕ್ಕಿ ತಿಂದೆ) ಎನ್ನುವ ಗಾದೆಯ ಮಾತು ಹಬ್ಬದ ಜನಪ್ರಿಯತೆಗೆ ಹಿಡಿದ ಕನ್ನಡಿಯಾಗಿದೆ.

ಹೀಗೆ ಬಲೀಂದ್ರ ಆಹಾರ ಉತ್ಪತ್ತಿಯ ಮತ್ತು ಸಂರಕ್ಷಣೆಯಲ್ಲಿ ಬಳಕೆಯಾಗುವ ಉಪಕರಣಗಳ ಗುಚ್ಛ. ಕೃಷಿಯ ಮೂಲ ಪ್ರೇರಕ, ಪೋಷಕಳಾಗಿರುತ್ತಾನೆ ಎಂಬುದಾಗಿ ಮರಾಟಿ ನಾಯ್ಕರು ಮತ್ತು ಮರಾಟಿಗೆಲ್ಲರೂ ನಂಬುವರು. ಬಲಿಯನ್ನು ಪೂಜಿಸುವ ದಿನ ಅವನ ಕೋಟೆಯ ಪ್ರತಿಕೃತಿಯನ್ನು ಪೂಜಿಸುವುದು ರೂಢಿಯಲ್ಲಿದೆ. ಬಲಿಯ ಸಲುವಾಗಿ

ಸಗಣಿಯಿಂದ ಕೆರಕಲು ಹುಡುವುದೇ ಕೋಟೆಯ ಪ್ರತಿಕೃತಿ ಎನ್ನಲಾಗುತ್ತಿದೆ. ದೀಪಾವಳಿಯ ಮೂರು ದಿನಗಳೂ ದೀಪ ಬೆಳಗಿಸಿ ಭಕ್ತಿಯಿಂದ ಪೂಜಿಸುವವರ ಮನೆ, ಮನಗಳಲ್ಲಿ ಆರೋಗ್ಯ, ಐಶ್ವರ್ಯ ತುಂಬಿರುತ್ತವೆಂದು ನಂಬುತ್ತಾರೆ. ಮೂಲತಃ ಕೃಷಿ ದೈವವಾಗಿರುವ ಬಲೀಂದ್ರನ ಬಗೆಗೆ ಪುರಾಣಗಳಿವೆ, ಕಥೆಗಳಿವೆ, ಐತಿಹ್ಯಗಳಿವೆ, ನಂಬಿಕೆಗಳಿವೆ.

ಬಲೀಂದ್ರ ಭೂಮಿಯನ್ನು ನೋಡಲು ಬರುವ ಮೂರು ದಿನಗಳನ್ನು ಸಂಭ್ರಮದಿಂದ ಹಬ್ಬ ಆಚರಿಸುತ್ತಾರೆ. ನರಕ ಚತುರ್ದಶಿಯಿಂದ ಬಲಿಪಾಡ್ಯದವರೆಗೆ ನಡೆಯುವ ಹಬ್ಬಗಳಲ್ಲಿ ಬಲಿಯ ರಾಜ್ಯದ ಸಮೃದ್ಧಿಯನ್ನು ನೆನಪಿಸಿಕೊಳ್ಳುತ್ತಾರೆ. ಬಲಿ ಚಕ್ರವರ್ತಿ ಕೃಷಿ ಪದ್ಧತಿಗೆ ಮೂಲ ಪ್ರೇರಕನೂ, ಪೋಷಕನೂ ಆಗಿರುವನೆಂದು ನಂಬಲಾಗಿದೆ. ಅವನ ಸ್ವಾಗತಕ್ಕೆ ಮೂರು ದಿನವೂ ದೀಪ ಬೆಳಗುವ ಪದ್ಧತಿ ಬಂದಿದೆಯೆಂದು, ಆ ಮೂಲಕ ಮಹಾಲಕ್ಷ್ಮೀ ದೀಪ ಬೆಳಗುವ ಮನೆ–ಮನಗಳಲ್ಲಿ ಶಾಶ್ವತವಾಗಿ ನೆಲೆಸುತ್ತಾಳೆಂದು ನಂಬಲಾಗುತ್ತಿದೆ.

## ಪರಾಮರ್ಶನ ಗ್ರಂಥಗಳು


೧. [illegible] ಅ., "[illegible]".
೨. [illegible], ೧೯೮೩.
೩. ಡಾ. ಕೆ. ಎಂ. ಮೈತ್ರಿ, ೨೦೦೨, ಬುಡಕಟ್ಟು ಕುಲಕಸುಬು,
೪. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ (ಪರಿಷ್ಕೃತ), ೨೦೦೧.
೫. ಕಿಟಲ್, ಕನ್ನಡ ಇಂಗ್ಲೀಷ್, ನಿಘಂಟು, ೧೮೯೪.
೬. ಸರ್ ಹರ್ಬರ್ಟ್ ರಿಸ್ಲೆ, ೧೯೦೧, ಭಾರತದ ಜನಗಣತಿ ವರದಿ, ಸಂ–೧.
೭. ಸರ್ ಜೆ. ಎ. ಬೇನ್ಸ್, ೧೮೯೧, ಭಾರತದ ಜನಗಣತಿ ವರದಿ, ಸಾಮಾನ್ಯ ವರದಿ.
೮. ಜೆ.ಎಚ್. ಹಟನ್, ೧೯೩೧, ಭಾರತದ ಜನಗಣತಿ ವರದಿ,
೯. ಡಾ. ಜಿ. ಸುಬ್ರಹ್ಮಣ್ಯ, ೨೦೧೬, ಸಾಮಾಜಿಕ ಸಮಸ್ಯೆಗಳು.
೧೦. ಡಾ. ಕೆ.ಎಂ. ಮೇತ್ರಿ, ೨೦೧೪, ಕರ್ನಾಟಕದ ಏಕೀಕರಣ ಮತ್ತು ಬುಡಕಟ್ಟುಗಳು, ಸಮಾಜ ಅಧ್ಯಯನ (ಸಂ) ಸಮಾಜ ವಿಜ್ಞಾನಗಳ ಸಂಶೋಧನೆ ಪತ್ರಿಕೆ ಸಂ–೧ ಸಂಚಿಕೆ–೧ ಜುಲೈ–ಡಿಸೆಂಬರ್.
೧೧. ಕೆ.ಎಂ. ಮೇತ್ರಿ, ೨೦೧೭, "ಸೂಕ್ಷ್ಮ ಆದಿವಾಸಿಗಳು",
೧೨. ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಪಟ್ಟಿ, ೨೦೧೧.
೧೩. ಉತ್ತರ ಕನ್ನಡ, ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯ ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಪಟ್ಟಿ, ೨೦೧೧.
೧೪. ಮಲ್ಲೇಪುರಂ ಜಿ. ವೆಂಕಟೇಶ, (ಸಂ), ಶಂಬಾ ಕೃತಿ ಸಂಪುಟ–೧,೧೯೯೯.
೧೫. ಮೋಹನ್ ಎಸ್, ೨೦೦೮, ಮರಾಟಿ ನಾಯ್ಕರು ಒಂದು ಸಾಂಸ್ಕೃತಿಕ ಅಧ್ಯಯನ.
೧೬. ಸುಂದರ ನಾಯಕ, ೨೦೦೮, 'ಕರಾವಳಿ ಕರ್ನಾಟಕ ಮರಾಟಿ ಜನಾಂಗ ಪರಂಪರೆ ಮತ್ತು ಆಧುನಿಕತೆ.